ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀಮತಿ ಭಾರತಿ ಶೆಟ್ಟಿ, (ನಾಮನಿರ್ದೇಶನ ಹೊಂದಿದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	225
ಉತ್ತರಿಸಬೇಕಾದ ದಿನಾಂಕ	:	02.02.2021
ಉತ್ತರಿಸಬೇಕಾದ ಸಚಿವರು	:	ಸಹಕಾರ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಸಹಕಾರ ಲೆಕ್ಕಪರಿಶೋಧನೆ ಇಲಾಖೆಯಿಂದ ಸರ್ಕಾರಕ್ಕೆ ವಾರ್ಷಿಕವಾಗಿ ಸಿಗುತ್ತಿರುವ ಆರ್ಥಿಕ ಹೊರೆ ಎಷ್ಟು;	ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯಲ್ಲಿ 2019-20ನೇ ಸಾಲಿನಲ್ಲಿ ವೇತನ, ವೇತನೇತರ ಹಾಗೂ ಆಡಳಿತಾತ್ಮಕ ವೆಚ್ಚಗಳಿಗೆ ಒಟ್ಟು ರೂ.3,643.49/-ಲಕ್ಷಗಳು ವೆಚ್ಚವಾಗಿರುತ್ತದೆ.
ಆ)	ವೈದ್ಯನಾಥನ್ ಸಮಿತಿ ವರದಿ ಜಾರಿ ಮುನ್ನ ಸರ್ಕಾರಿ ಇಲಾಖೆಯಿಂದ ಸಂಗ್ರಹವಾಗುತ್ತಿದ್ದ ಆಡಿಟ್ ಶುಲ್ಕ ಎಷ್ಟು; (ವರ್ಷವಾರು ವಿವರ ಒದಗಿಸುವುದು)	ವೈದ್ಯನಾಥನ್ ಸಮಿತಿ ವರದಿಯು 2010-11ನೇ ಸಾಲಿನಲ್ಲಿ ಜಾರಿಗೆ ಬಂದಿದ್ದು, ಲೆಕ್ಕಪರಿಶೋಧನಾ ಇಲಾಖೆಯ 2010-11 ನೇ ಸಾಲಿನ ಪೂರ್ವದ ಮೂರು ಸಾಲುಗಳ ಲೆಕ್ಕಪರಿಶೋಧನಾ ಶುಲ್ಕದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ)	ಪ್ರಸ್ತುತವಾಗಿ ಸಹಕಾರ ಲೆಕ್ಕಪರಿಶೋಧನಾ ಇಲಾಖೆ ನಿರ್ವಹಿಸುತ್ತಿರುವ ಕಾರ್ಯಗಳಿಗೆ ಹೋಲಿಸಿದ್ದಲ್ಲಿ ಇರುವ ಸಿಬ್ಬಂದಿಗಳ ಸಂಖ್ಯೆ ಅತೀ ಹೆಚ್ಚಾಗಿಲ್ಲವೆ;	ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ನಿರ್ವಹಿಸುತ್ತಿರುವ ಕಾರ್ಯಗಳಿಗೆ ಹೋಲಿಸಿದ್ದಲ್ಲಿ ಸಿಬ್ಬಂದಿಗಳ ಸಂಖ್ಯೆ ಹೆಚ್ಚಾಗಿರುವುದಿಲ್ಲ.
ಈ)	ಈ ಬಗ್ಗೆ ಶ್ರೀನಿವಾಸಮೂರ್ತಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಆಡಳಿತಾತ್ಮಕ ಸುಧಾರಣಾ ಆಯೋಗ ನೀಡಿರುವ ಶಿಫಾರಸ್ಸನ್ನು ಕೂಡಲೇ ಜಾರಿಗೆ ತರಲು ಸರ್ಕಾರದಿಂದ ವಿಳಂಬವಾಗುತ್ತಿರಲು ಕಾರಣವೇನು; ಈ ಬಗ್ಗೆ ತುರ್ತಾಗಿ ಸರ್ಕಾರ ನಿರ್ಧಾರ ಕೈಗೊಂಡು ಸಿಬ್ಬಂದಿಗಳನ್ನು ಲೆಕ್ಕ ಇಲಾಖೆಗೆ ನೀಡಲು ಸರ್ಕಾರ ಅನುಸರಿಸುವ ವಿಧಿವಿಧಾನಗಳೇನು?	ಶ್ರೀ ಶ್ರೀನಿವಾಸಮೂರ್ತಿ ರವರ ಅಧ್ಯಕ್ಷತೆಯಲ್ಲಿ 6ನೇ ವೇತನ ಆಯೋಗವು ರಚನೆಯಾಗಿರುತ್ತದೆ. ಸದರಿ ಆಯೋಗದ ವರದಿಯಲ್ಲಿ ಇಲಾಖೆಗಳ ವಿಲೀನದ ಸಂಬಂಧ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯನ್ನು ರಾಜ್ಯ ಲೆಕ್ಕಪರಿಶೋಧನಾ ಹಾಗೂ ಲೆಕ್ಕಪತ್ರ ಇಲಾಖೆಯ ಜೊತೆ ವಿಲೀನಕ್ಕೆ ಶಿಫಾರಸ್ಸು ಮಾಡಲಾಗಿರುತ್ತದೆ. ಸದರಿ ಆಯೋಗದ ಈ ಶಿಫಾರಸ್ಸು ಸಲಹಾತ್ಮಕವಾಗಿರುತ್ತದೆ. ಸಹಕಾರ ಸಂಘಗಳ ಲೆಕ್ಕಪರಿಶೋಧನೆಯು ರಾಜ್ಯ ಲೆಕ್ಕಪತ್ರ ಇಲಾಖೆಯ ಲೆಕ್ಕಪರಿಶೋಧನೆಗಿಂತ ಸಂಪೂರ್ಣ ಭಿನ್ನವಾಗಿರುತ್ತದೆ. ಸಹಕಾರ ಸಂಘಗಳ ಕಾಯ್ದೆ 1959 ಕಲಂ 63(1) ರಿಂದ 63(20) ರವರೆಗಿನ ಹಾಗೂ ಸೌಹಾರ್ದ ಕಾಯ್ದೆ ಕಲಂ 33(1) ರಿಂದ 33(20) ರವರೆಗಿನ ಎಲ್ಲಾ ಶಾಸನಬದ್ಧ ಕರ್ತವ್ಯಗಳನ್ನು ಹಾಗೂ ಸಹಕಾರ ಸಂಘಗಳ ನಿಯಮ 1960 ರ ನಿಯಮ 29 ರಂತೆ ಶಾಸನಬದ್ಧ ಜವಾಬ್ದಾರಿಗಳನ್ನು ಲೆಕ್ಕಪರಿಶೋಧನಾ ಇಲಾಖೆಯು ನಿರ್ವಹಿಸಬೇಕಾಗಿದ್ದು, ಸಹಕಾರ ಸಂಘಗಳ ಹಿತದೃಷ್ಟಿಯಿಂದ ಇಲಾಖೆಯನ್ನು ಸ್ವತಂತ್ರವಾಗಿ ಉಳಿಸುವ ಅಗತ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ ಲೆಕ್ಕಪರಿಶೋಧನಾ ಇಲಾಖೆಯನ್ನು ರಾಜ್ಯ ಲೆಕ್ಕಪತ್ರ ಇಲಾಖೆಗೆ ವಿಲೀನಗೊಳಿಸದೇ ಪ್ರತ್ಯೇಕವಾಗಿ ಉಳಿಸಲು ಸರ್ಕಾರವು ನಿರ್ಣಯ ಕೈಗೊಂಡಿದ್ದು, ಈ ನಿರ್ಣಯವನ್ನು ಸಿಆಸುಇ ಇಲಾಖೆಗೆ (ಆಡಳಿತ ಸುಧಾರಣೆ) ತಿಳಿಸಲಾಗಿರುತ್ತದೆ.

ಸಿಒ 03 ಸಿಎಲ್ಎಮ್ 2021 (ಇ)

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಅನುಬಂಧ

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯಲ್ಲಿ 2010–11ನೇ ಸಾಲಿನ ಹಿಂದಿನ 3 ಸಾಲುಗಳ ಲೆಕ್ಕಪರಿಶೋಧನಾ ಶುಲ್ಕದ ವಿವರಗಳು ಈ ಕೆಳಕಂಡಂತಿವೆ.

Audit Fee Statistics(In Lakhs)

	O/B	Demand	Total	Collection	Written Off	Balance
2008–09	919.65	2456.97	3376.62	2377.94	0.01	998.67
2009–10	998.67	2976.12	3974.79	2878.49	0.1	1096.2
2010–11	1096.2	3173.63	4269.83	3051.97	0.34	1217.52

Audit Cost Statistics(In Lakhs)

	O/B	Demand	Total	Collection	Balance
2008–09	153.51	384.32	537.83	405.05	132.78
2009–10	132.78	405.4	538.18	405.73	132.45
2010–11	132.45	324.89	457.34	348.24	109.1

ನಿರ್ದೇಶಕರು,
ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ